ದಿನಾಂಕ 25-06-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 2(ಎ) ಮತ್ತು (ಸಿ) ಪ್ರತಿವಾದಿಯರ ಪರ ಶ್ರೀ ಬಿ.ಎಸ್.ಡಿ ವಕೀಲರಿಂದ.**

ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಗೊತ್ತಿದೆ. ಈ ದಾವೆಯನ್ನು ವಿಭಾಗಕ್ಕಾಗಿ ಹೂಡಿರುತ್ತೇವೆ. ನಾನು ಈ ದಾವೆಯನ್ನು ವಿಠೋಬ ನಾಯಕ ಹಾಗೂ ವೆಂಕಟೇಶ ನಾಯಕ ರವರುಗಳ ವಿರುದ್ಧ ಹೂಡಿರುತ್ತೇನೆ. ನಾನು ಈ ದಾವೆಯನ್ನು ಜಮೀನುಗಳನ್ನು ಖರೀದಿಸಿದವರ ವಿರುದ್ಧವು ಹೂಡಿರುತ್ತೇನೆ. ಈ ದಾವೆಯನ್ನು ನನ್ನ ಕುಟುಂಬದವರಾದ ವಿಠೋಬ ನಾಯಕ, ವೆಂಕಟೇಶ ನಾಯಕ, ಶ್ಯಾಮಲಾ, ಸತ್ಯಭಾಮ ಮತ್ತು ಶೈಲಾ, ಅನ್ನಪೂರ್ಣ, ತ್ರೀವೇಣಿ, ಅನುಸೂಯಾ ರವರ ವಿರುದ್ಧ ಹೂಡಿರುತ್ತೇನೆ. ಈ ದಾವೆಯನ್ನು ಖರೀದಿದಾರರಾದ ಸೂರ್ಯನಾರಾಯಣ, ತ್ರೀಮೂರ್ತಿ, ನಾಗೇಶರಾವ್, ತಿಪ್ಪೆಸ್ವಾಮಿ, ರುದ್ರಯ್ಯ, ವೆಂಕೋಬ, ಕ್ರಿಷ್ಣಪ್ಪ, ವೀರಪ್ಪ ಮತ್ತು ಭೀಮಣ್ಣ ರವರುಗಳ ವಿರುದ್ಧ ಹೂಡಿರುತ್ತೇನೆ. ಈ ದಾವೆಯನ್ನು ಎರೆಭೂಮಿಯಾದ 50 ಎಕರೆ ಮತ್ತು ಜಾಲಹಳ್ಳಿಯ 30 ಎಕರೆ ಜಮೀನುಗಳ ಮೇಲೆ ಹೂಡಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ 21, 41, 42, 46, 47 ಆಗಿದ್ದು ಜಾಲಹಳ್ಳಿ ಸೀಮಾಂತರದ ದಾವಾ ಆಸ್ತಿಗಳ ಸರ್ವೆ ನಂಬರ 163, 164, 166 ಆಗಿರುತ್ತವೆ. ದಾವಾ ಆಸ್ತಿ ಸರ್ವೆ ನಂಬರಗಳ ವಿಸ್ತೀರ್ಣ ಗೊತ್ತಿಲ್ಲ.

ನನ್ನ ಅಜ್ಜನ ಹೆಸರು ತಿಮ್ಮಣ್ಣ ಆಗಿರುತ್ತದೆ. ತಿಮ್ಮಣ್ಣ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ತಿಮ್ಮಣ್ಣ ರವರ ಹೆಣ್ಣು ಮಕ್ಕಳ ಹೆಸರು ಅಯ್ಯಮ್ಮ ಇದ್ದು ಇನ್ನೊಬ್ಬರ ಹೆಸರು ಗೊತ್ತಿಲ್ಲ. ತಿಮ್ಮಣ್ಣ ರವರ ಗಂಡು ಮಕ್ಕಳ ಹೆಸರು ರಂಗನಾಥ ಮತ್ತು ಕಾಳಿಂಗ ಆಗಿರುತ್ತದೆ. ತಿಮ್ಮಣ್ಣ ರವರ ಹೆಣ್ಣು ಮಕ್ಕಳು ಜೀವಂತ ಇರುವುದಿಲ್ಲ. ತಿಮ್ಮಣ್ಣ ರವರ ಹೆಣ್ಣು ಮಕ್ಕಳು ನಾವು ಚಿಕ್ಕವರಿರುವಾಗಲೇ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡಾಗ ನನ್ನ ವಯಸ್ಸು 4-5 ವರ್ಷ ಇದ್ದಿರಬಹುದು. ನನ್ನ ತಾಯಿಯ ಹೆಸರು ಭಾಗಿರಥಿ ಆಗಿದ್ದು ಅವರೂ ಸಹ ತೀರಿಕೊಂಡಿರುತ್ತಾರೆ. ನನ್ನ ತಾಯಿ ತೀರಿಕೊಂಡು 15 ವರ್ಷ ಆಗಿರುತ್ತದೆ. ನನ್ನ ತಂದೆ-ತಾಯಿಗೆ 07 ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನನ್ನ ತಂದೆ-ತಾಯಿಯ ಮಕ್ಕಳು ವಿಠೋಬ ನಾಯಕ, ಸೀತಮ್ಮ, ವಿಜಯಲಕ್ಷ್ಮೀ, ಅನ್ನಪೂರ್ಣ, ಅನುಸೂಯಾ, ಪದ್ಮಾವತಿ, ತಾಯಮ್ಮ, ತ್ರೀವೇಣಿ ಮತ್ತು ವೆಂಕಟೇಶ ಆಗಿರುತ್ತಾರೆ. ನನ್ನ ಸಹೋದರಿ ತಾಯಮ್ಮ ರವರು ಜೀವಂತ ಇರುವುದಿಲ್ಲ. ತಾಯಮ್ಮ ರವರು ತೀರಿಕೊಂಡು 4-5 ವರ್ಷ ಆಗಿರುತ್ತದೆ. ತಾಯಮ್ಮ ಅವರಿಗೆ ಒಬ್ಬ ಹೆಣ್ಣು ಮಗಳು, 03 ಜನ ಗಂಡು ಮಕ್ಕಳು ಇರುತ್ತಾರೆ. ತಾಯಮ್ಮ ರವರ ಮಕ್ಕಳ ಹೆಸರು ಪ್ರಮೋದ, ಚೇತನ ಮತ್ತು ಅನುಪಮ ಆಗಿದ್ದು ಒಬ್ಬ ಗಂಡು ಮಗ ತೀರಿಕೊಂಡಿರುತ್ತಾರೆ ಅವರ ಹೆಸರು ನೆನಪಿಲ್ಲ. ತಾಯಮ್ಮ ರವರ ಮಕ್ಕಳಾದ ಪ್ರಮೋದ ಹಾಗೂ ಚೇತನ ಅವರು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಗುಡೆಜಾಲಿಯಲ್ಲಿ ವಾಸವಿರುತ್ತಾರೆ. ಅನುಪಮ ರವರು

ಜಾಲಹಳ್ಳಿಯಲ್ಲಿ ಮತ್ತು ನನ್ನ ಜೊತೆ ಸಿರುಗುಪ್ಪದಲ್ಲಿ ವಾಸವಿರುತ್ತಾರೆ. ಈ ದಾವೆಯಲ್ಲಿ ಪ್ರಮೋದ, ಚೇತನ ಹಾಗೂ ಅನುಪಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆಯೋ ಇಲ್ಲವೋ ಗೊತ್ತಿಲ್ಲ. ಸೀತಮ್ಮ ರವರನ್ನು ಈ ದಾವೆಯಲ್ಲಿ ಮೊದಲು 1 ನೇ ಪ್ರತಿವಾದಿಯನ್ನಾಗಿ ಮಾಡಿ ನಂತರ ಯಾವ ಕಾರಣಕ್ಕಾಗಿ ಅವರ ಹೆಸರನ್ನು ತೆಗೆದಿರುತ್ತೇವೆ ಎಂದರೆ ನನ್ನ ಅಜ್ಜ ಅವರಿಗೆ ಆಸ್ತಿಯನ್ನು ಕೊಟ್ಟಿದ್ದು ದಾವಾ ಆಸ್ತಿಗಳಲ್ಲಿ ಭಾಗ ಬೇಡ ಎಂದಿದ್ದರಿಂದ ಅವರನ್ನು ಈ ದಾವೆಯಿಂದ ತೆಗೆದಿರುತ್ತೇವೆ. ನನ್ನ ಅಜ್ಜ ತಿಮ್ಮಣ್ಣ ರವರು ಸೀತಮ್ಮ ರವರಿಗೆ ಆಸ್ತಿ ಕೊಡಬೇಕು ಎಂದು ಹೇಳಿದ್ದು ನನ್ನ ತಂದೆ ಹಾಗೂ ಚಿಕ್ಕಪ್ಪ ಅವರಿಗೆ ಆಸ್ತಿ ಕೊಟ್ಟಿದ್ದರು. ವಿಜಯಲಕ್ಷ್ಮೀ ಅವರಿಗೆ 03 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದು, ಗಂಡು ಮಗ ಈಗ ತೀರಿಕೊಂಡಿರುತ್ತಾರೆ. ವಿಜಯಲಕ್ಷ್ಮೀ ಅವರ ಮಕ್ಕಳು ರಂಗಮ್ಮ, ಪದ್ಮಾವತಿ, ರೇಣುಕಾ ಮತ್ತು ರಂಗನಾಥ ಆಗಿರುತ್ತಾರೆ. ರಂಗಮ್ಮ ರವರು ನಿಡಗುಂದಿಯಲ್ಲಿ ವಾಸವಿರುತ್ತಾರೆ. ವಿಜಯಲಕ್ಷ್ಮೀ ಅವರ ಮಗಳಾದ ರಂಗಮ್ಮ ರವರನ್ನು ನಾವು ಕರೆದಿದ್ದು ಅವರು ಬಂದಿರುವುದಿಲ್ಲ ಆದಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ, ಸಾಕ್ಷಿ ಮುಂದುವರೆದು ಅವರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆಯೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ವಾದ ಪತ್ರದ ವಂಶಾವಳಿಯಲ್ಲಿ ವಿಜಯಲಕ್ಷ್ಮೀ ಯವರ ಮಗ ರಂಗಯ್ಯ ಎಂದು ನಮೂದು ಇದ್ದು ಅವರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆಯಾ ಎಂದರೆ ಹೆಸರು ರಂಗಮ್ಮ ಇದ್ದು ತಪ್ಪಿನಿಂದ ವಂಶಾವಳಿಯಲ್ಲಿ ರಂಗಯ್ಯ ಎಂದು ತೋರಿಸಲಾಗಿದೆ ಎಂದು ಹೇಳುತ್ತಾರೆ. ರಂಗಯ್ಯ ಎನ್ನುವವರನ್ನು 3 ನೇ ಪ್ರತಿವಾದಿಯನ್ನಾಗಿ ತೋರಿಸಲಾಗಿದೆ ಎಂದರೆ ರಂಗಮ್ಮ ರವರನ್ನು ರಂಗಯ್ಯ ಎಂತಲೂ ಕರೆಯುತ್ತೇವೆ ಎಂದು ಹೇಳುತ್ತಾರೆ. ರಂಗನಾಥ ರವರ ಹೆಂಡತಿಯ ಹೆಸರು ಕವಿತಾ ಆಗಿರುತ್ತದೆ. ಕವಿತಾ ರವರು ದೇವದುರ್ಗದಲ್ಲಿ ವಾಸವಿರುತ್ತಾರೆ. ಕವಿತಾ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಕವಿತಾ ಅವರಿಗೆ ಒಬ್ಬ ಗಂಡು ಮಗ ಇರುತ್ತಾರೆ, ಅವರ ಹೆಸರು ಗೊತ್ತಿಲ್ಲ.

ನನ್ನ ತಂದೆಯ ಚಿಕ್ಕಪ್ಪನಾದ ಕಾಳಿಂಗ ರವರು 1986-87 ರಲ್ಲಿ ತೀರಿಕೊಂಡಿರುತ್ತಾರೆ. ಯಾವ ದಾವಾ ಆಸ್ತಿ ಯಾರ ಹೆಸರಿನಲ್ಲಿ ಇರುತ್ತದೆ ಗೊತ್ತಿಲ್ಲ. ದಾವಾ ಆಸ್ತಿಗಳು ಯಾವ ವರ್ಷದಲ್ಲಿ ಯಾರ ಯಾರ ಹೆಸರಿಗೆ ಮುಟೇಶನ್ ಆಗಿರುತ್ತವೆ ಗೊತ್ತಿಲ್ಲ.

ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲೀಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.